ಪ್ರೇಮಾ ಮತ್ತು ಅವಳ ತಾಯಿ ಬೆಳಗ್ಗೆ ಆರುಗಂಟೆಗೇ ಮೈಸೂರಿಗೆ ಹೊರಟಿದ್ದರು. ಪ್ರೇಮಾಳ ಕೊಲೀಗ್ ಮಗಳ ಮದುವೆಗೆ ಅವರು ಹೋಗಲೇಬೇಕಿತ್ತು.

''ಭುವನಾ ನಾವು ಮೈಸೂರಿಗೆ ಹೋಗಲೇಬೇಕು. ನೀನು ಮಕ್ಕಳನ್ನು ರೆಡಿಮಾಡಿ ಶಾಲೆಗೆ ಕಳಿಸ್ತೀಯಾ? ನಾವು ರಾತ್ರಿ ಒಳಗೆ ಬರ್ತೀವಿ.''

''ಆಗಲಿ ಪ್ರೇಮಾ. ಅದೇನೂ ಕಷ್ಟದ ಕೆಲಸವಲ್ಲ. ಹೋಗಿ ಬನ್ನಿ.''

''ಕಿಶೋರ್ ಕೂಡ ಮದುವೆಗೆ ಬರಬಹುದು. ಏನಾದರೂ ಹೇಳಬೇಕಾ?''

''ಬೇಡ. ಅವರೇ ಮುಂದಿನ ಭಾನುವಾರ ಬರ್ತಾರೆ.''

ಅವರು ಹೋದ ಮೇಲೆ ಭುವನಾ ದೋಸೆಗೆ ಚಟ್ನಿ, ಪಲ್ಯ ಮಾಡಿದ್ದಳು. ಮಕ್ಕಳ ಡಬ್ಬಿಗೆ ಚಪಾತಿ, ಪಲ್ಯ, ಮೊಸರನ್ನ ಹಾಕಿದ್ದಳು. ಮಕ್ಕಳಿಬ್ಬರನ್ನೂ ಕಳಿಸಿ ಒಂದು ಕಪ್ ಕಾಫಿ ಹಿಡಿದು ಕುಳಿತಳು.

''ಕಿಶೋರ್‌ಗೆ ಏನಾದರೂ ಹೇಳಬೇಕಾ?'' ಪ್ರೇಮಾಳ ಪ್ರಶ್ನೆ ನೆನಪಾಯಿತು.

ಅವಳು ಕಣ್ಣುಮುಚ್ಚಿ ಸೋಫಾಗೆ ಒರಗಿದಳು. ಕಣ್ಣೀರಿನಿಂದ ಕೆನ್ನೆಗಳು ಒದ್ದೆಯಾದವು. ನೆನಪಿನ ಸುರುಳಿ ಬಿಚ್ಚಿ, ಅವಳನ್ನು ಕಾಡಿತು.

ಭುವನಾ ಚಿಂತಾಮಣಿಯವಳು. ಅವಳ ತಂದೆ ರಾಮನರಸಯ್ಯ ಪೋಸ್ಟ್‌ಮಾಸ್ಟರ್. ಮಧ್ಯಮವರ್ಗದ ಕುಟುಂಬದ ಹಿರಿಯ ಮಗಳು ಭುವನಾ. ಬಿ.ಎ., ಬಿ.ಎಡ್. ಮಾಡಿ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಳು. ತುಂಬಾ ಚೆಲುವೆ ಅವಳು; ತನ್ನನ್ನು ಸುರಸುಂದರನಾದ ಶ್ರೀಮಂತ ಯುವಕ ಕೈಹಿಡಿಯುತ್ತಾನೆಂದು ಕನಸು ಕಾಣುತ್ತಿದ್ದಳು. ಅವಳಿಗೆ ಇಬ್ಬರು ತಂಗಿಯರಿದ್ದರು. ತಂದೆ ತಾಯಿಗೆ ಮಗಳಿಗೆ ಮದುವೆ ಮಾಡುವ ಆಸೆ. ಇದೇ ಸಂದರ್ಭದಲ್ಲಿ ಸುಪ್ರಸಿದ್ಧ ವಕೀಲ ಸುಬ್ಬರಾಯರು ಮಗನಿಗೆ ಹೆಣ್ಣು ನೋಡುತ್ತಿದ್ದರು.

ರಾಮಚಂದ್ರ ಜೋಯಿಸರು ಅವರಿಗೆ ಭುವನಾಳ ಫೋಟೊ ತೋರಿಸಿದ್ದರು. ಜಾತಕಗಳೂ ಕೂಡಿದ್ದವು. ಅವರು ತಾವಾಗಿ ರಾಮನರಸಯ್ಯನವರ ಮನೆಗೆ ಬಂದು ಹೇಳಿದ್ದರು. ''ನಮ್ಮ ಮನೆಯಲ್ಲಿ ಎಲ್ಲರಿಗೂ ನಿಮ್ಮ ಮಗಳು ಇಷ್ಟವಾಗಿದ್ದಾಳೆ. ಈ ಭಾನುವಾರ ನಾವು ನಿಮ್ಮ ಮನೆಗೆ ಬಂದು ಹುಡುಗೀನ್ನ ನೋಡ್ತೀವಿ. ಹುಡುಗ ಹುಡುಗಿ ಒಬ್ಬರನ್ನೊಬ್ಬರು ನೋಡಲಿ.''

''ಆಗಲಿ ಸರ್. ಖಂಡಿತಾ ಬನ್ನಿ'' ಎಂದಿದ್ದರು ರಾಯರು. ಭಾನುವಾರ ಹುಡುಗಿ ನೋಡಿದ ಶಾಸ್ತ್ರವಾಯಿತು. ಸುಬ್ಬರಾಯರು ತಮ್ಮ ಕುಟುಂಬದ ಬಗ್ಗೆ ಹೇಳಿದ್ದರು. ''ನನಗೆ ಮೂವರು ಗಂಡು ಮಕ್ಕಳು. ದೊಡ್ಡವನು ಕಿಶೋರನೇ ವರ. ಅವನು ನನ್ನ ಹಾಗೆ ವಕೀಲ. ಎರಡನೆಯವನು ಸಾಗರ್ ಎಂ.ಬಿ.ಬಿ.ಎಸ್. ಓದ್ತಿದ್ದಾನೆ. ಮೂರನೆಯವನು ಈಶ್ವರ್. ಪಿ.ಯು.ಸಿ ಯಲ್ಲಿದ್ದಾನೆ. ನಮಗೆ ಸರಳವಾಗಿ ಒಂದು ದಿನದ ಮದುವೆ ಮಾಡಿಕೊಡಿ. ಆದರೆ, ನಮ್ಮದೊಂದು ಕಂಡಿಷನ್.''

''ಹೇಳಿ ಸರ್.''

''ಭುವನಾ ಮದುವೆಯಾದ ಮೇಲೆ ಕೆಲಸ ಬಿಡಬೇಕು. ನಮಗೆ ಬೇಕಾದಷ್ಟು ಆಸ್ತಿಯಿದೆ. ಸೊಸೆಯಾದವಳು ಮನೆಸಂಸಾರ ನೋಡಿಕೊಂಡರೆ ಸಾಕು.''

ಭುವನಾ ಒಪ್ಪಿದ್ದಳು. ಅವಳು ಇಷ್ಟಪಟ್ಟು ಕೆಲಸಕ್ಕೆ ಸೇರಿರಲಿಲ್ಲ. ಅವಳು ಬಯಸಿದಂತಹ ಮನೆ ಅವಳಿಗೆ ಸಿಕ್ಕಿತ್ತು. ಭುವನಾಳಿಗೆ ಹೋಲಿಸಿದರೆ ಕಿಶೋರ್ ಕಪ್ಪು. ಕೊಂಚ ಸ್ಥೂಲ ದೇಹಿ. ಆದರೆ, ಭುವನಾಳಿಗೆ ಅದರಲ್ಲಿ ಕೊರತೆಯೇನಿದೆ? ಎನ್ನಿಸಿತ್ತು.

'ಶ್ರೀಮಂತ, ವಿದ್ಯಾವಂತ, ಒಳ್ಳೆಯ ಮನೆತನ, ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ